ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ದಿನಾಂಕ: 19-06-2015

ಸಂಖ್ಯೆ: SPDSSRMA2ಆರ್ಎಂಎಸ್ಎ2015

**ಕೊಟೇಶನ್ ಅಹ್ವಾನ**

ಸರ್ವ ಶಿಕ್ಷಣ ಅಭಿಯನದಡಿಯಲ್ಲಿ ಶೈಕ್ಷಣಿಕ ವಿಶ್ಲೇಷಣಾ ವರದಿ 2014-15 ಪುಸ್ತಕವನ್ನು ಮುದ್ರಿಸಿ ಈ ಕಛೇರಿಯಿಂದ ನೀಡುವ ವಿವರದಂತೆ ಜಿಲ್ಲಾ ಹಂತಕ್ಕೆ ವಿತರಿಸುವ ಸಲುವಾಗಿ ಪ್ರತಿ ಪುಸ್ತಕ್ಕೆ ತಗಲುವ ವೆಚ್ಚದ ಬಗ್ಗೆ ದರಪಟ್ಟಿಯನ್ನು ಕರೆಯಲಾಗಿದೆ. ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ **ದಿನಾಂಕ: 27-06-2015** ರೊಳಗೆ ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01 ಇವರಿಗೆ ತಲುಪುವಂತೆ ಸಲ್ಲಿಸುವುದು ಹಾಗೂ ಲಕೋಟೆಯ ಮೇಲೆ **"ಶೈಕ್ಷಣಿಕ ವಿಶ್ಲೇಷಣಾ ವರದಿ 2014-15 ಮುದ್ರಣಕ್ಕಾಗಿ ದರಪಟ್ಟಿ"** ಎಂದು ನಮೂದಿಸುವುದು. ಇದರ ತಾಂತ್ರಿಕ ವಿಶಿಷ್ಠತೆಯ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ವಿವರಣೆ | ಅಳತೆ |
|---|---|---|
| 1 | ಮುದ್ರಿಸಬೇಕಾದ ಅಂದಾಜು ಪ್ರತಿಗಳು | ಆಂಗ್ಲ ಭಾಷೆ- 1000<br>ಕನ್ನಡ ಭಾಷೆ- 1500 |
| 2 | ಕಾಗದದ ಅಳತೆ | 120 ಜಿ.ಎಸ್.ಎಮ್ ಆರ್ಟ್ ಪೇಪರ್ |
| 3 | ಹೊರಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 300 ಜಿ.ಎಸ್.ಎಮ್ ಆರ್ಟ್ ಬೋರ್ಡ್ ಬಹುವರ್ಣ |
| 4 | ಹೊರಪುಟಗಳ ಸಂಖ್ಯೆ<br><br>ಒಳಪುಟಗಳ ಸಂಖ್ಯೆ | 1 ಮತ್ತು 4ನೇ ರಕ್ಷಾ ಪುಟಗಳನ್ನು ಬಹುವರ್ಣಗಳಲ್ಲಿ ಮುದ್ರಿಸಬೇಕು.<br>110+4 |
| 5 | ಒಳ ಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ ಮತ್ತು ಮುದ್ರಣ( ಕಪ್ಪು ಬಿಳುಪಿನಲ್ಲಿ) | 120 ಜಿ.ಎಸ್.ಎಮ್ ಆರ್ಟ್ ಪೇಪರ್ 22 ಪುಟಗಳ ಬಹುವರ್ಣಗಳಲ್ಲಿ ಹಾಗೂ 88 ಪುಟಗಳನ್ನು ಏಕವರ್ಣ ಮುದ್ರಿಸಬೇಕು. |
| 6 | ಒಳ ಪುಟಗಳ ಸಂಖ್ಯೆ | 114 |
| 7 | ಬೈಡಿಂಗ್ | ಬುಕ್ ಬೈಂಡಿಂಗ್ (Perfect Binding) |

**ಸೂಚನೆ ಮತ್ತು ನಿಬಂಧನೆಗಳು:**

1. ಮುದ್ರಣಕ್ಕೆ ಸಾಹಿತ್ಯವನ್ನು ಆಯ್ಕೆಯಾದ ಸಂಸ್ಥೆಗೆ ಸಿ.ಡಿ ರೂಪದಲ್ಲಿ ನೀಡಲಾಗುವುದು,
2. ಮುದ್ರಣಕ್ಕೆ ಹೋಗುವ ಮುನ್ನ ಮೊದಲ ಪ್ರತಿಯ ಅನುಮೋದನೆಯನ್ನು ಸರ್ವಶಿಕ್ಷಣ ಅಭಿಯಾನ ಕಛೇರಿಯಿಂದ ಪಡೆದ ನಂತರವೇ ಮುದ್ರಣ ಕಾರ್ಯವನ್ನು ಪ್ರಾರಂಭಿಸುವುದು.

3. ನಮೂದಿಸಿದ ದರವು ಮುದ್ರಣ, ಹಾಗೂ ಎಲ್ಲಾ ವಿವಿಧ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು, ಮುದ್ರಣ ಕಾರ್ಯಕ್ಕೆ ಯಾವುದೇ ಮುಂಗಡ ಪಾವತಿಸಲಾಗುವುದಿಲ್ಲ.
4. ಮುದ್ರಣ ಕಾರ್ಯಕ್ಕೆ ಬಳಸುವ ಕಾಗದದ ಸ್ಯಾಂಪಲ್‌ಗಳನ್ನು ದೃಢೀಕರಿಸಿ, ಕೊಟೇಶನ್‌ನೊಂದಿಗೆ, ಕಡ್ಡಾಯವಾಗಿ ಸಲ್ಲಿಸುವುದು.
5. ಕಾರ್ಯಾದೇಶದಲ್ಲಿ ನಿಖರವಾದ ಪ್ರತಿಗಳ ಸಂಖ್ಯೆ ಮತ್ತು ನಿಖರವಾದ ಪುಟಗಳ ಆಧಾರದ(Pro-rata) ಮೇಲೆ ಬಿಲ್ಲನ್ನು ಪಾವತಿಸಲಾಗುವುದು.
6. ಕಳಪೆ ಮಟ್ಟದ ಮುದ್ರಣ ಕಾರ್ಯಕ್ಕೆ, ಮುದ್ರಣದೋಷ ಕಂಡುಬಂದಲ್ಲಿ ಅಥವಾ ನಿಗಧಿತ ಸ್ಪೆಸಿಫಿಕೇಷನ್ ಗಿಂತ ಕಡಿಮೆ ಗುಣಮಟ್ಟದ ಪೇಪರ್ ಮುದ್ರಣ ಕಾರ್ಯಕ್ಕೆ ಬಳಕೆ ಮಾಡಿರುವುದು ಕಂಡು ಬಂದಲ್ಲಿ ಇಂತಹ ಪುಸ್ತಕಗಳನ್ನು ತಿರಸ್ಕರಿಸಲಾಗುವುದು ಹಾಗೂ ಈ ಬಗ್ಗೆ ಯಾವುದೆ ಅನುದಾನ ಬಿಡುಗಡೆ ಮಾಡುವುದಿಲ್ಲ. ಇದರಿಂದ ಆಗಬಹುದಾದ ನಷ್ಟಗಳಿಗೆ ತಮ್ಮ ಸಂಸ್ಥೆಯೇ ಜವಬ್ದಾರಿಯಾಗಿರುತ್ತದೆ.
7. ಕಾರ್ಯದೇಶ ನೀಡಿದ 10 ದಿನಗಳ ಒಳಗಾಗಿ ಮುದ್ರಣ ಮತ್ತು ವಿತರಣೆಯನ್ನು ಪೂರ್ಣಗೊಳಿಸತಕ್ಕದ್ದು, ಪ್ರತಿ ದಿನದ ವಿಳಂಬಕ್ಕೆ 0.10% ರಂತೆ ದಂಡ ವಿಧಿಸಲಾಗುವುದು. ದಂಡದ ದರ 10% ಮೀರಿದರೆ ಮುದ್ರಣ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು.
8. ತಡವಾಗಿ ಸಲ್ಲಿಸಿದ ದರ ಪಟ್ಟಿಗಳನ್ನು ಯಾವುದೇ ಕಾರಣಕ್ಕೂ ಅಂಗೀಕರಿಸುವುದಿಲ್ಲ ಮತ್ತು ಕೊಟೇಶನ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕಛೇರಿಯು ಹೊಂದಿರುತ್ತದೆ.
9. ಮುದ್ರಣ ಕಾರ್ಯದ ನಂತರ ಬಿಲ್ ಜೊತೆಯಲ್ಲಿ ಸಿ.ಡಿ ರೂಪದಲ್ಲಿ ಅಂತಿಮ ಮುದ್ರಣ ಸಾಹಿತ್ಯದ ವಿವರಗಳನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು, ರಾಜ್ಯ ಕಛೇರಿಗೆ ನೀಡುವ ವಿತರಣೆ ವಿತರಿಸಿದ ನಂತರ ಪಡೆದ ಸ್ವೀಕೃತ ಸಮೇತ ಬಿಲ್ ಸಲ್ಲಿಸುವುದು.
10. **www.ssakarnataka.gov.in** ವೆಬ್‌ಸೈಟ್‌ನ್ನು ಪ್ರಕಟಿಸಲಾಗಿದೆ.

(ಕರಡು ಪ್ರತಿಯು ರಾಜ್ಯ ಯೋಜನಾ ನಿರ್ದೇಶಕರಿಂದ

ಅನುಮೋದನೆಯಾಗಿರುತ್ತದೆ.)

20/6/2015.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವಶಿಕ್ಷಣ ಅಭಿಯಾನ
ಬೆಂಗಳೂರು-01